# ನಕ್ಕುಬಿಡಿ

ಗಂಡ: ಲೇ ಇವ್ಳೆ, ದೇವರು ನಿಂಗೆ ಎರಡು ಕಣ್ಣು ಕೊಟ್ಟಿದ್ದಾನೆ. ಅಕ್ಕಿಯಲ್ಲಿನ ಕಲ್ಲನ್ನು ಸರಿಯಾಗಿ ತೆಗೆದು ಅಡುಗೆ ಮಾಡಬಾರದೇ?
ಹೆಂಡತಿ: ಅದೇ ದೇವರು ನಿಮಗೆ 32 ಹಲ್ಲುಗಳನ್ನ ಕೊಟ್ಟಿದ್ದಾನೆ ತಾನೇ. ನೀವ್ಯಾಕೆ ಆ ಕಲ್ಲನ್ನು ಪುಡಿ ಮಾಡಿ ತಿನ್ನಬಾರದು?

ಪ್ರೇಯಸಿಯ ಮದುವೆಗೆ ಹೋದ ಹುಡುಗನೊಬ್ಬನನ್ನು ಹುಡುಗಿ ತಂದೆ ಅಡ್ಡಗಟ್ಟಿ 'ಹೇ ಯಾರಪ್ಪ ನೀನು' ಎಂದು ಕೇಳಿದ.
ಅದಕ್ಕೆ ಉತ್ತರಿಸಿದ ಹುಡುಗ, 'ನಾನು ಸೆಮಿ ಫೈನಲ್‌ನಲ್ಲಿ ಸೋತವನು. ಫೈನಲ್ ನೋಡಲು ಬಂದಿದ್ದೇನೆ' ಎಂದ.

ಹೆಂಡತಿ: ಬದುಕಿನಲ್ಲಿ ಒಳ್ಳೆಯ ಗಂಡ ಅಂತ ಯಾರೂ ಇರುವುದಿಲ್ಲ. ಸಿಕ್ಕವರನ್ನೇ ಹೊಡೆದು, ಬಡಿದು, ಹಂಗಿಸಿ, ಟೀಕಿಸಿ, ತರಾಟೆಗೆ ತೆಗೆದುಕೊಂಡು ಸರಿಪಡಿಸಿಕೊಳ್ಳಬೇಕು.
ಗಂಡ: ನಿಜ ಕಣೇ, ಬದುಕಿನಲ್ಲಿ ಸುಂದರ ಹೆಂಡತಿ ಅಂತ ಯಾರೂ ಇರುವುದಿಲ್ಲ. ಸಿಕ್ಕವಳಿಗೆ ಸುಣ್ಣ–ಬಣ್ಣ ಬಳಿದು, ಮೇಕಪ್ ಮಾಡಿ ಸುಂದರಿಯನ್ನಾಗಿ ಮಾಡಿಕೊಳ್ಳಬೇಕು.

ಹಾರ್ಟ್ ಸರ್ಜನ್ ಒಬ್ಬರು, ಆಪರೇಷನ್ ಮುಗಿಸಿ ಶಸ್ತ್ರಚಿಕಿತ್ಸೆ ಕೊಠಡಿಯಿಂದ ಆಗಷ್ಟೇ ಹೊರಬಂದರು. ಅವರನ್ನು ಮುತ್ತಿಕೊಂಡ ರೋಗಿಯ ಸಂಬಂಧಿಕರು, 'ಡಾಕ್ಟ್ರೇ ಈಗ ರೋಗಿ ಹೇಗಿದ್ದಾರೆ. ಆಪರೇಷನ್ ಸಕ್ಸಸ್ ಆಯ್ತಾ?' ಎಂದು ಕೇಳಿದರೆ, ಪಕ್ಕದಲ್ಲೇ ಇದ್ದ ರೋಗಿಯ ಪತ್ನಿ ಕೇಳಿದ್ದು, 'ಸಾರ್ ಅವರ ಹೃದಯದಲ್ಲಿ ಬೇರೆ ಯಾವ ಮಹಿಳೆ ಇಲ್ಲ ತಾನೇ' ಅಂತ.

ತಂದೆ: ಯಾವಾಗಪ್ಪ ನೀನು ಮದುವೆಯಾಗೋದು?
ಮಗ: ಅಪ್ಪ ಸುಂದರಿ ಮತ್ತು ಬುದ್ಧಿವಂತೆಯಾದ ಹುಡುಗಿಯನ್ನು ಹುಡುಕುತ್ತಿದ್ದೇನೆ.
ತಂದೆ: ಹಾಗಿದ್ದರೆ ನಿನಗೆ ಗಣಪತಿಯ ಮದುವೆ ದಿವಸ ಮದುವೆಯಾಗುತ್ತದೆ ಬಿಡು!

ಅಧಿಕಾರಿ: ನೀನು ದೇಶದ ಆರ್ಥಿಕತೆಗೆ ಮಾರಕ.
ಸೈಕಲ್ ಸವಾರ: ಯಾವ ಕಾರಣಕ್ಕೆ?
ಅಧಿಕಾರಿ: ಏಕೆಂದರೆ ಆತ, ವಾಹನ ಖರೀದಿಸುವುದಿಲ್ಲ, ಬ್ಯಾಂಕ್ ಲೋನ್ ಪಡೆಯುವುದಿಲ್ಲ, ವಾಹನ ವಿಮೆ ಮಾಡಿಸುವುದಿಲ್ಲ, ಗ್ಯಾರೇಜ್‌ಗೆ ಹೋಗುವುದಿಲ್ಲ ಮತ್ತು ಪಾರ್ಕಿಂಗ್ ಶುಲ್ಕ ನೀಡುವುದಿಲ್ಲ.

(ಸಂಗ್ರಹ) ಡಾ. ಅನಿಕೇತ್ ಶರ್ಮಾ, ಬೆಂಗಳೂರು

ಪ್ರಿನ್ಸಿಪಾಲ್: ಹುಡುಗಿಯರ ಹಾಸ್ಟೆಲ್ ಕಡೆ ಒಮ್ಮೆ ಹೋದರೆ ₹1000, ಎರಡನೇ ಬಾರಿ ಹೋದರೆ ₹2000 ಮತ್ತು ಮೂರನೇ ಬಾರಿ ಹೋದರೆ ₹5000 ದಂಡ ಕಟ್ಟಬೇಕು.
ಹುಡುಗರು: ಸರ್ ಅದೆಲ್ಲ ಯಾಕೆ, ತಿಂಗಳ ಪಾಸ್‌ಗೆ ಎಷ್ಟು ಅಂತ ಹೇಳಿಬಿಡಿ.




ಆರೋಗ್ಯಕರವಾದ ಸವಿಯನ್ನು ಆನಂದಿಸಿ

Along with HERBS
100% NATURAL
ARECA TEA
HEALTHY • TASTY • REFRESHING

ಇತರ ಚಹಾಗಳಿಗಿಂತ ಹೆಚ್ಚಿನ ಆ್ಯಂಟಿಆಕ್ಸಿಡೆಂಟ್ ಗುಣಗಳನ್ನು ಹೊಂದಿದೆ.
ಮಧುಮೇಹ ನಿರ್ವಹಣೆಯಲ್ಲಿ ಸಾಬೀತಾಗಿದೆ.
ಕೊಲೆಸ್ಟರಾಲ್ ಅನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆ.
ಶಕ್ತಿಯನ್ನು ಹೆಚ್ಚಿಸುತ್ತದೆ.
ಒತ್ತಡವನ್ನು ನಿವಾರಿಸುತ್ತದೆ.
ದೀರ್ಘಕಾಲೀನ ಬಳಕೆಯಲ್ಲಿ ಸುರಕ್ಷಿತ.




ಆರೋಗ್ಯಕರ • ರುಚಿಕರ • ಉಲ್ಲಾಸಕರ

5 ರುಚಿಕರ ಸ್ವಾದಗಳಲ್ಲಿ ಲಭ್ಯ
ಪುದೀನ, ಶುಂಠಿ, ರೆಗ್ಯುಲರ್, ನಿಂಬೆ ಮತ್ತು ತುಳಸಿ




WORLD'S FIRST ARECA TEA
INNOVATIVE PRODUCT OF THE YEAR 2015 MAKE IN INDIA EXCELLENCE AWARD
ENTREPRENEURIAL INNOVATION 2017
BEST AGRO FOOD STARTUP 2018

ಪ್ರಮೋಟರ್ಸ್: ಗ್ರೀನ್ ರೆಮಿಡೀಸ್, ಉಡುಪಿ
+91 820 252 9023
ಕಸ್ಟಮರ್ ಕೇರ್ ನಂ:
+91 80 2672 6337 / +91 63610 08174
ಇ ಮೇಲ್: info@arecatea.in
ಆನ್‌ಲೈನ್ ನಲ್ಲಿ ಖರೀದಿಸಿ
amazon | bb big basket | Flipkart
www.arecatea.in ನಲ್ಲೂ ಲಭ್ಯ